2

# ಪ್ರಶ್ನೆ:

# “ಸಭೆಯ ಬಗ್ಗೆ ಪ್ರವಾದಿಗಳು ಏನು ಹೇಳಿದರು?”

## ಉತ್ತರ:

ತಿಳಿಯಲ್ಪಟ್ಟಂತೆ ಯಾವುದೇ ಹಳೇ ಒಡಂಡಿಕೆಯ ಪ್ರವಾದಿಯು “ಸಭೆ” ಎಂಬ ಪದದ ಬಗ್ಗೆ ಮಾತನಾಡಲಿಲ್ಲ.[1] ಸ್ನಾನಿಕನಾದ ಯೋಹಾನನೂ ಮಾತಾಡಲಿಲ್ಲ, ಆದರೆ ಯೋಹಾನ ಮತ್ತು ಪ್ರವಾದಿಗಳು ಇಬ್ಬರೂ ಸಭೆಯ ಬಗ್ಗೆ ಮಾತಾಡಿದರು. ಹಳೇ ಒಡಂಬಕೆಯ ಮತ್ತು ಯೋಹಾನನ ಪ್ರವಾದಿಸುವಿಕೆಯ ದೃಷ್ಟಿಕೋನದಲ್ಲಿ ಅಂತ್ಯವು ಹೊಸ ಒಡಂಬಡಿಕೆಯ ಸಭೆಯಾಗಿತ್ತು. ಅದನ್ನು ಸ್ವೀಕರಿಸಲು ಇಷ್ಟವುಳ್ಳವರಿಗೆ, ಹೊಸ ಒಡಂಬಡಿಕೆಯ ಸಭೆಯು “ದೇವರು ಪೂರ್ವದಲ್ಲಿದ್ದ ತನ್ನ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ್ದ ಎಲ್ಲಾ ಸಂಗತಿಗಳನ್ನು ಸರಿಮಾಡುವ ಕಾಲವನ್ನು” ಒಳಗೊಂಡಿರುತ್ತದೆ (ಅಪೊಸ್ತಲರ ಕೃತ್ಯಗಳು 3:21).

ಅಪೊಸ್ತಲರ ಕೃತ್ಯಗಳು 3ರಲ್ಲಿ ಪೇತ್ರನಿಂದ ಹೇಳಲ್ಪಟ್ಟ “ಸರಿಮಾಡುವ ಕಾಲವು” ಬಬಿಲೋನಿನ ಸೆರೆಯಿಂದ ಯೆಹೂದ್ಯರು ತಮ್ಮ ಸ್ವದೇಶಕ್ಕೆ ಹಿಂದಿರುಗಿಬಂದಾಗ ಆದ “ಸರಿಮಾಡುವ ಕಾಲ” ಆಗಿರಲಿಲ್ಲ. ಆ ಸರಿಮಾಡುವಿಕೆಯು ಸೆರೆಯ ವಾಸ ಪ್ರಾರಂಭ ವಾದ ನಂತರ ಎಪ್ಪತ್ತು ವರ್ಷಗಳ ನಂತರಕ್ಕೆ ನೇಮಿಸಲ್ಪಟ್ಟಿತ್ತು (ಯೆರೆಮೀಯ 25:11), ಮತ್ತು ಅದು ಕ್ರಿ.ಪೂ. 606-536ರಲ್ಲಿ ನೆರವೇರಿತು (ನೋಡಿರಿ ಎಜ್ರ 1; 2).

ಇದಲ್ಲದೆ, ಪುನಃಸ್ಥಾಪನೆಯ ಸಮಯಗಳ ಪ್ರಾರಂಭವಾಗುವವರೆಗೆ ಸಭೆಯು ಸಮಯವನ್ನು ತುಂಬಿಕೊಂಡಿರುವುದೆಂದು ಪೇತ್ರನು ಹೇಳುತ್ತಿರುವದಿಲ್ಲ. ಸಭೆಯು (ಆತನ ರಾಜ್ಯವು) ತಂದೆಗೆ ಹಿಂದುರುಗಿ ಒಪ್ಪಿಸಿಕೊಡಲ್ಪಡುವಾಗ (1 ಕೊರಿಂಥ 15:24) ಯಾವುದರ ಪುನಃಸ್ಥಾಪನೆಯೂ ಇರುವದಿಲ್ಲ ಅದರ ಬದಲು ಆಕಾಶಗಳೂ ಭೂಮಿಯೂ ದಾಟಿಹೋಗುವವು, ಸುಟ್ಟು ಹೋಗುವವು (2 ಪೇತ್ರ 3:10, 11; ಪ್ರಕಟನೆ 21:1), ಪುನಃಸ್ಥಾಪಿಸಲ್ಪಡುವದಿಲ್ಲ. ಎಲ್ಲವೂ “ಹೊಸದಾಗಿ” ಇರುವುದು (ಪ್ರಕಟನೆ 21:5).

ಇಲ್ಲ, ಕ್ರಿ.ಶ. 30ರಿಂದ ಜಗತ್ತಿನ ಅಂತ್ಯದವರೆಗೆ ಪುನಃಸ್ಥಾಪನೆಯ ಸಮಯ ಗಳು ಪೂರ್ತಿಯಾಗುವವರೆಗೆ ಸಭೆಯು ಕಾಲವಧಿಯಲ್ಲಿರುವುದು. ಸಭೆಯು ಸ್ಥಾಪಿಸಲ್ಪಟ್ಟಂದಿನಿಂದ ಪುನಃಸ್ಥಾಪನೆಯು ಮುಂದುವರಿಯುತ್ತಲೇ ಇದೆ, ಈಗಲು ಮುಂದುವರಿಯುತ್ತಲಿದೆ, ಯೇಸುವು ಬರುವವರೆಗೆ ಮುಂದುವರಿಯುತ್ತಲೇ ಇರುವುದು. ಯೋಹಾನನ ಕೆಲಸವು ಪುನಃಸ್ಥಾಪಿಸುವುದಾಗಿತ್ತು. ಎಲೀಯನ ಆತ್ಮದಲ್ಲಿ, ಅವನು

“ಮಕ್ಕಳ ಕಡೆಗೆ ತಂದೆಗಳ ಹೃದಯಗಳನ್ನು” ಮತ್ತು ಅವಿಧೇಯರನ್ನು ನ್ಯಾಯದ ಕಡೆಗೆ ತಿರಿಗಿಸುತ್ತಾ, ಎಲ್ಲಾ ಸಂಗತಿಗಳನ್ನು ಪುನಃಸ್ಥಾಪಿಸಿದನು (ಮತ್ತಾಯ 17:11-13; ಲೂಕ 1:17). ಅದೇ ರೀತಿಯಲ್ಲಿ, ತನ್ನ ಸಭೆಯ ಮುಖಾಂತರ ಯೇಸುವಿನ ಕಾರ್ಯವು ಜನರನ್ನು ಕತ್ತಲೆಯಿಂದ ಬೆಳಕಿನ ಕಡೆಗೆ ಮತ್ತು ಸೈತಾನನ ಅಧಿಕಾರದಿಂದ ದೇವರ ಕಡೆಗೆ ತಿರುಗಿಸುತ್ತ, ಪುನಃಸ್ಥಾಪಣೆಯ ಕಾರ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 26:18). ಅಪೊಸ್ತಲರ ಕೃತ್ಯಗಳು 3:21ರಲ್ಲಿ ಪೇತ್ರನು ಹೇಳಿದ “ಪುನಃಸ್ಥಾಪನೆಯ” ಅವಧಿಯು ಆತ್ಮಿಕ ಪುನಃಸ್ಥಾಪಣೆಯಾಗಿತ್ತು, ಆದರೆ ಪ್ರಾಪಂಚಿಕವಾದದ್ದು ಆಗಿರಲಿಲ್ಲ. ಅದು ಸುವಾರ್ತೆಯ ಪ್ರಸಂಗಿಸುವಿಕೆಯಿಂದ ಪರಿಣಾಮಗೊಳ್ಳುತ್ತದೆ (ರೋಮಾಪುರ 1:16) ಮತ್ತು “ಸಭೆ” ಯಂತೆ ತಿಳಿಯಲ್ಪಡುವ ಹೊರಗೆ ಕರೆಯಲ್ಪಟ್ಟ ಜನರ ಗುಂಪಿನಲ್ಲಿ ಪರಿಣಾಮಗೊಳ್ಳುತ್ತದೆ. “ಪುನಃಸ್ಥಾಪಣೆಯ ಅವಧಿಯು” ಮುಗಿಯುವವರೆಗೆ ಪರಲೋಕವು ಯೇಸುವನ್ನು ಇಟ್ಟುಕೊಂಡಿರುತ್ತದೆ. ನಿಜವಾಗಿಯೂ, “ಸಮುವೇಲನೂ ಅವನ ತರುವಾಯ ಬಂದು ಪ್ರವಾದಿಸಿದ ಎಲ್ಲಾ ಪ್ರವಾದಿಗಳೂ ಸಹ ಈಗಿನ ದಿನಗಳ ವಿಷಯದಲ್ಲಿ ತಿಳಿಸಿದರು” (ಅಪೊಸ್ತಲರ ಕೃತ್ಯಗಳು 3:24) ಕ್ರಿ.ಶ. 30ರಲ್ಲಿ ಪೇತ್ರನು ಪ್ರಸಂಗಿಸಿದಂತೆ - “ಈ ದಿನಗಳು” ಎಂಬ ಮಾತು, ನಿಶ್ಚಯವಾಗಿ ಕ್ರಿಸ್ತನು ಹಿಂದುರಿಗಿ ಬಂದ ನಂತರದ ಒಂದು ಅವಧಿಗೆ ಸಂಬಂಧಿಸಿರುವದಿಲ್ಲ; ಯಾಕಂದರೆ ಅಲ್ಲಿ ದಿನಗಳು ಅಸ್ತಿತ್ವದಲ್ಲಿ ಇರುವದಿಲ್ಲ.

ಕ್ರಿ.ಶ. 30ರಲ್ಲಿ ಪೇತ್ರನಿಂದ ಹೇಳಲ್ಪಟ್ಟ ಸಂತೋಷದ ವಾರ್ತೆಯು ಎಲ್ಲಾ ಕ್ರೈಸ್ತರು “ಪ್ರವಾದಿಗಳ ಮತ್ತು ದೇವರು ತಂದೆಗಳೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಮಕ್ಕಳಾಗಿದ್ದಾರೆ” ಎಂಬುದು. ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನವು ಅವನ ಸಂತತಿಯಲ್ಲಿ ಭೂಲೋಕದ ಎಲ್ಲಾ ಕುಂಟುಂಬಗಳು ಅಶೀರ್ವದಿಸಲ್ಪಡುವವು ಎಂಬುದಾಗಿತ್ತು (ಅಪೊಸ್ತಲರ ಕೃತ್ಯಗಳು 3:25). ಬಿದ್ದು ಹೋಗದ ವಾಕ್ಯದಲ್ಲಿ ಬಲವನ್ನು ಆಳಗೊಳಿಸುವ ಮತ್ತು ಬಲವಾದ ವಿಶ್ವಾಸವನ್ನು ಕಟ್ಟುವ ಒಂದು ಅನುಭವವು ಪೇತ್ರನು ತನ್ನ ಪ್ರಸಂಗಿಸುವಿಕೆಯನ್ನು ಸ್ಥಾಪಿಸಿದ ಪ್ರವಾದಿಕ ಹೇಳಿಕೆಗಳನ್ನು ಪುನರಾವಲೋಕಿಸುವುದಾಗಿದೆ.

## ಆದಿಕಾಂಡದಲ್ಲಿ ಪ್ರವಾದನೆಗಳು

### ಪೂರ್ವ ಶುಭವಾರ್ತೆ

ಮೊದಲಿನ ಶುಭವಾರ್ತೆಯು, ಸುವಾರ್ತೆಯ ಮೊದಲನೆಯ ಸಾರುವಿಕೆಯು ಏದೆನ್ ತೋಟದಲ್ಲಿ ಹೇಳಲ್ಪಟ್ಟಿತು. ಸ್ತ್ರೀ ಸಂತಾನವು - ಕ್ರಿಸ್ತನು (ಮತ್ತಾಯ 12:29) ಮತ್ತು ಕ್ರೈಸ್ತರು (ರೋಮಾಪುರ 16:20) - ಸರ್ಪದ ಸಂತತಿಯು, ಸೈತಾನನ ಮೇಲೆ (ಇಬ್ರಿಯ 2:14; 1 ಯೋಹಾನ 3:8) ಜಯಹೊಂದುವರು ಎಂದು ದೇವರು ಆದಿಕಾಂಡ 3:15ರಲ್ಲಿ ಹೇಳಿದ್ದಾನೆ. ಆದಿಕಾಂಡ 3:15ರಲ್ಲಿ ವ್ಯಕ್ತಪಡಿಸಿದ ನಿರೀಕ್ಷೆಯು ಶತಮಾನಗಳಲ್ಲಿ ಅನೇಕ ಜನರನ್ನು ಪ್ರೋತ್ಸಾಹಿಸಿದೆ.

### ಅಬ್ರಹಾಮನಿಗೆ ವಾಗ್ದಾನಗಳು

ಸ್ತ್ರೀಯ ಆತ್ಮಿಕ ಸಂತತಿಯಲ್ಲಿ (ಸೇತನ ಮುಖಾಂತರ, ಕಾಯಿನನ ಮುಖಾಂತರ ಅಲ್ಲ), ಅಬ್ರಹಾಮನಲ್ಲಿ ತನ್ನ ನಿತ್ಯ ಉದ್ದೇಶವನ್ನು ಬೆಳಿಸುವುದು ಯೋಗ್ಯವೆಂದು ದೇವರು ನೋಡಿದನು (ಆದಿಕಾಂಡ 12:1-3). ಅಬ್ರಹಾಮನು ನಿಜವಾದ ದೇವರಲ್ಲಿ

ಹೇಗೆ ವಿಶ್ವಾಸಿಯಾದನು ಎಂಬುದು ಸ್ಪಷ್ಟವಾಗಿ ತಿಳಿದಿರುವದಿಲ್ಲ. ಅವನ ತಂದೆ (ತೆರಹನು) ಒಬ್ಬ ಮೂರ್ತಿಪೂಜಕನಾಗಿದ್ದನು (ಯೆಹೋಶುವ 24:2). ಹಾಗಿದ್ದರೂ ಅವನ ತಾತಂದಿರಲ್ಲಿ, ಶೇಮನು ದೇವರ ಆರಾಧಕನಾಗಿದ್ದನು (ಆದಿಕಾಂಡ 9:26). ಅಬ್ರಹಾಮನ ಜೀವಮಾನದ ಮೊದಲಿನ 150 ವರ್ಷಗಳಲ್ಲಿ ಶೇಮನು ಜೀವದಿಂದ ಇದ್ದನು. ಅವನು ಅಬ್ರಹಾಮನ ಹೃದಯದಲ್ಲಿ ವಿಶ್ವಾಸವನ್ನು ವೈಯಕ್ತಿಕವಾಗಿ ಹುಟ್ಟಿಸಿರಬಹುದು. ಹೇಗೂ ಇರಲಿ, ದೇವರಿಗಾಗಿ ಅಬ್ರಹಾಮನ ಭಕ್ತಿಯು ಪರಲೋಕ ದಲ್ಲಿ ಮಾತ್ರವೇ ನೆರವೇರಿಸಲ್ಪಡುವ ವಾಗ್ದಾನಗಳಿಗೆ ಮೂಲನನ್ನಾಗಿ ಅವನನ್ನು ದೇವರು ಮಾಡುವಷ್ಟು ಬಲವಾಗಿತ್ತು (ಮತ್ತಾಯ 8:11). ಅಬ್ರಹಾಮನ ಸಂತತಿಯ ಮುಖಾಂತರ (ಆದಿಕಾಂಡ 22:18) - ಕ್ರಿಸ್ತನ ಮುಖಾಂತರವಾಗಿ - ಸುಮಾರು ಹದಿನೆಂಟು ಶತಮಾನಗಳ ನಂತರ (ಗಲಾತ್ಯ 3:16) - ಭೂಲೋಕದ ಎಲ್ಲಾ ಕುಟುಂಬಗಳು ಆಶೀರ್ವಾದಿಸಲ್ಪಡುವವು (ಆದಿಕಾಂಡ 12:3). ಇಂದು, ಕ್ರಿಸ್ತನಲ್ಲಿರುವ ಯೆಹೂದ್ಯರೂ ಅನ್ಯರೂ ಇಬ್ಬರೂ ಆತ್ಮಿಕವಾಗಿ ಅಬ್ರಹಾಮನ ಸಂತತಿಯಾಗಿದ್ದಾರೆ, ಮತ್ತು ವಾಗ್ದಾನಕ್ಕನುಸಾರವಾಗಿ ಬಾಧ್ಯಸ್ಥರಾಗಿದ್ದಾರೆ (ಗಲಾತ್ಯ 3:29).

### ಯೆಹೂದನಿಗೆ ವಾಗ್ದಾನ

ಪರಲೋಕ ಯೋಜನೆಗಳೊಂದಿಗೆ ಸಾಮರಸ್ಯವಾಗಿ ಅಬ್ರಹಾಮನ ಮರಿಮಕ್ಕಳಲ್ಲಿ ಒಬ್ಬನಾದ ಯೆಹೂದನು ಕ್ರಿಸ್ತನ ಪೂರ್ವಜರಲ್ಲಿ ಒಬ್ಬನಾಗುವನೆಂದು ಮುಂತಿಳಿಸಲ್ಪಟ್ಟಿತು. ಮುಂತಿಳಿಸುವಿಕೆಯಲ್ಲಿ ಕ್ರಿಸ್ತನು ಶಿಲೋವನಂತೆ ("ರಾಜದಂಡ ಹಿಡುವವನು") ಮತ್ತು ಅರಸನಂತೆ (ರಾಜದಂಡ ಹಿಡಿಯುವವನಂತೆಯೂ ನಿಯಮವನ್ನು ಪ್ರಕಟಿಸುವವನಂತೆಯೂ) ವಿವರಿಸಲ್ಪಟ್ಟಿದ್ದಾನೆ: "ರಾಜದಂಡವನ್ನು ಹಿಡಿಯತಕ್ಕವನು ಬರುವ ತನಕ ಆ ದಂಡವು ಯೆಹೂದನ ಕೈಯಿಂದ ತಪ್ಪುವದಿಲ್ಲ, ಮುದ್ರೆಕೋಲು ಅವನ ಪಾದಗಳಿಂದ ಕದಲುವದಿಲ್ಲ; ಅವನಿಗೆ ಅನ್ಯಜನಗಳೂ ವಿಧೇಯ ರಾಗಿರುವರು" (ಆದಿಕಾಂಡ 49:10). ಶಿಲೋವನಿಗೆ ವಿಧೇಯರಾಗುವ "ಜನಾಂಗ ಗಳು" ಯೇಸುವಿನಿಂದ ಹೊರಗೆ ಕರೆಯಲ್ಪಟ್ಟವರಲ್ಲದೇ ಬೇರೆಯವರಾಗಿರುವದಿಲ್ಲ (ಮತ್ತಾಯ 16:18, 19).

## "ಸಮುವೇಲನಿಂದ ಮತ್ತು ಅವನ ನಂತರದ ಉತ್ತರಾಧಿಕಾರಿಗಳಿಂದ" ಪ್ರವಾದನೆಗಳು

### ಸಮುವೇಲನಿಂದ ದಾಖಲೆ ಮಾಡಿದ ಪ್ರವಾದನೆ

ಅಪೊಸ್ತಲರ ಕೃತ್ಯಗಳು 3:24ರಲ್ಲಿ ಪೇತ್ರನು ಸಮುವೇಲನನ್ನು ಹೊಸ ಒಡಂಬಡಿಕೆಯ ಸಭೆಯ "ಈ ದಿನಗಳನ್ನು" ಮುಂತಿಳಿಸಿದ ಪ್ರವಾದಿಯಂತೆ ಉಲ್ಲೇಖಿ ಸಿದ್ದಾನೆ. ಸಭೆಯು 2 ಸಮುವೇಲ 7:16ರಲ್ಲಿ ಒಂದು ಮನೆ ಮತ್ತು ಒಂದು ರಾಜ್ಯದಂತೆ ಉದಾಹರಣೆಯಾಗಿ ನೋಡಲ್ಪಟ್ಟಿದೆ. ಈ ಮನೆಯ ಬರುವಿಕೆಯು ನಿಶ್ಚಿತವಾಗಿತ್ತು ಮತ್ತು ಅದರ ಅವಧಿಯು ನಿತ್ಯವಾದದ್ದಾಗಿರಬೇಕಾಗಿತ್ತು. ಈ ಪ್ರವಾದಿಕ ಹಿನ್ನಲೆಯ ಬೆಳಕಿನಲ್ಲಿ, ಸಭೆಯನ್ನು ವಿವರಿಸುವಲ್ಲಿ ಹೊಸ ಒಡಂಬಡಿಕೆಯು ಒಂದು ಮನೆತನ ಮತ್ತು ಒಂದು ರಾಜ್ಯವನ್ನು ವಿವರಿಸುವದರಲ್ಲಿ ಆಶ್ಚರ್ಯವಿರುವದಿಲ್ಲ (1 ತಿಮೊಥೆ 3:15; ಮತ್ತಾಯ 16:19).

**ದಾವೀದನಿಂದ ಪ್ರವಾದನೆ**

ಸಮುವೇಲನು ದಾವೀದನನ್ನು ಇಸ್ರಾಯೇಲಿನ ರಾಜಕೀಯ ವಂಶದ ಮೂಲನಂತೆ ಅಭಿಷೇಕಿಸಿದನು. ಹೊಸ ಒಡಂಬಡಿಕೆಯ ಹೊರಗೆ ಕರೆಯಲ್ಪಟ್ಟ ಜನರ ಬಗ್ಗೆ ಒಂದು ಬಹಳ ಮಹತ್ವದ ವಿಷಯವನ್ನು ಮುಂತಿಳಿಸಲು ದೇವರು ದಾವೀದನನ್ನು ಪ್ರವಾದಿಯನ್ನಾಗಿ ಮಾಡಿದನು (ಅಪೊಸ್ತಲರ ಕೃತ್ಯಗಳು 2:30): "ನೀನು ಸೈನ್ಯವನ್ನು ಕೂಡಿಸುವ ದಿನದಲ್ಲಿ, ನಿನ್ನ ಪ್ರಜೆಗಳು ಸಂತೋಷದಿಂದ ತಾವಾಗಿಯೇ ಸೇರಿಕೊಳ್ಳುವರು. ಪರಿಶುದ್ಧ ವಸ್ತ್ರ ಭೂಷಿತರಾದ ..." (ಕೀರ್ತನೆ 110:3). ಮಾನಸಾಂತರ ಪಡದ ಜನಾಂಗಗಳು, ನ್ಯಾಯತೀರ್ವಿಕೆಯ ದಿನದಲ್ಲಿ, ಮೆಸ್ಸೀಯನ ರೋಷದ ಬೆತ್ತವನ್ನು ಅನುಭವಿಸುವರು (ಕೀರ್ತನೆ 2:9; ಪ್ರಕಟನೆ 19:15). ಆತನ ಸ್ವಂತ ಜನಾಂಗ, ಹೊರಗೆ ಕರೆಯಲ್ಪಟ್ಟ ಮಂಡಲಿ, ಪವಿತ್ರ ಜೀವಿತದ ಸೌಂದರ್ಯದಲ್ಲಿ ಸ್ವಯಂ ಸೇವಕರಾಗಿ ಆತನ ಸೇವೆ ಮಾಡುವರು.

**ಯೆಶಾಯನಿಂದ ಪ್ರವಾದನೆ**

ಹಿಂದಿನ ಯಾವುದೇ ಪ್ರವಾದಿಗಿಂತ ಹೆಚ್ಚಾಗಿ, ಎಂಟು ಶತಮಾನಗಳ ಮೊದಲು ಕರ್ತನ ಸಭೆಯನ್ನು ನೋಡಲು ಯೆಶಾಯನು ಶಕ್ತನಾದನು. ಹೊಸ ಒಡಂಬಡಿಕೆಯ ಸಭೆಯನ್ನು "ಯೆಹೋವನ ಮಂದಿರದ ಬೆಟ್ಟದಂತೆ" ಸೂಚಿಸಲು ನೇಮಿಸಲ್ಪಟ್ಟನು (ಯೆಶಾಯ 2:2), ಅದರಲ್ಲಿ ಎಲ್ಲಾ ದೇಶಗಳ ಜನರು ಪ್ರವಾಹದಂತೆ ಬರುವರು. ಹೊಸ ಒಡಂಬಡಿಕೆಯ ಬರಹಗಾರರು ಸಭೆಯನ್ನು ಪ್ರವಾದಿಕ ಮಾತುಗಳಲ್ಲಿ - ಒಂದು ಪರ್ವತದಂತೆ ಮತ್ತು ಒಂದು ಮನೆಯಂತೆ ಸ್ವಾಭಾವಿಕವಾಗಿ ವಿವರಿಸುವದನ್ನು ಕಂಡುಕೊಳ್ಳುವೆವು. "ನೀವು ಚೀಯೋನ್ ಪರ್ವತಕ್ಕೂ ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ ... ಬಂದಿರುವಿರಿ" ಎಂದು ಇಬ್ರಿಯ 12:22 ಹೇಳುತ್ತದೆ (ನೋಡಿರಿ ಇಬ್ರಿಯ 3:6).

ಸಭೆಯು ಪ್ರಾರಂಭವಾಗುವ ಸ್ಥಳವು ಯೆರೂಸಲೇಮ ಎಂದು ಮುಂತಿಳಿಸಲು ಯೆಶಾಯನು ಅಧಿಕಾರ ಹೊಂದಿದನು (ಯೆಶಾಯ 2:3). ಅದಕ್ಕೆ ಸರಿಯಾಗಿ, ಯೇಸುವು ತನ್ನ ಅಪೊಸ್ತಲರಿಗೆ, ತನ್ನ ಹೆಸರಿನಲ್ಲಿ ಪ್ರಸಂಗಿಸುವದಕ್ಕೆ ಬಲದಿಂದ ತುಂಬಿಸಲ್ಪಡುವ ಮೊದಲು ಯೆರೂಸಲೇಮಿನಲ್ಲಿ ಕಾದುಕೊಂಡಿರಬೇಕೆಂದು ನಿರ್ದೇಶಿಸಿದನು (ಲೂಕ 24:46-49). ಪ್ರವಾದನೆಗೆ ಸರಿಯಾಗಿ, ಅದರಂತೆ ಆಕಾಶದ ಕೆಳಗಿರುವ ಪ್ರತಿಯೊಂದು ದೇಶದೊಳಗಿಂದ ಜನರು (ಅಪೊಸ್ತಲರ ಕೃತ್ಯಗಳು 2:5) ಸಭೆಯ ಸದಸ್ಯರನ್ನಾಗಿ ಮಾಡುವ ಸಂದೇಶವನ್ನು - ಕ್ರಿಸ್ತನ ಒಡೆತನದ ಶುಭವಾರ್ತೆಯನ್ನು ಅಪೊಸ್ತಲರು ಸಾರುವದನ್ನು ಕೇಳಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:36). ಪರಿಣಾಮವು ಸಭೆಯಾಗಿರುವ ಒಂದೇ ದೇಹದಲ್ಲಿ ಮೂರುಸಾವಿರ ಜನರು ಬಾಪ್ತಿಸ್ಮ ಹೊಂದಿದರು (ಅಪೊಸ್ತಲರ ಕೃತ್ಯಗಳು 2:41; ನೋಡಿರಿ 1 ಕೊರಿಂಥ 12:13; ಕೊಲೊಸ್ಸೆ 1:18). ಆ ಸಭಾ ಸದಸ್ಯರ ಮೇಲೆ "ದಾವೀದನಿಗೆ ಖಂಡಿತವಾಗಿ ವಾಗ್ದಾನ ಮಾಡಿದ ಕೃಪಾವರಗಳು" ಸುರಿಸಲ್ಪಟ್ಟವು (ಯೆಶಾಯ 55:3) ಮಹಾ ಆಶೀರ್ವಾದಗಳು ಅವರಿಗೂ ಮತ್ತು ಇಂದು ಎಲ್ಲಾ ಕ್ರೈಸ್ತರಿಗೂ ಒಳಪಟ್ಟಿರುವವು. ಅಂಥ ಆಶೀರ್ವಾದಗಳನ್ನು ಆದಿಯಿಂದ ಯಾರೂ ಕೇಳಿರಲಿಲ್ಲ, ಯಾರ ಕಿವಿಗೂ ಬೀಳಲಿಲ್ಲ, ಯಾರ ಕಣ್ಣೂ ಕಂಡಿರಲಿಲ್ಲ (ಯೆಶಾಯ 64:4; ನೋಡಿರಿ 1 ಕೊರಿಂಥ 2:9), ಆದರೆ ಈಗ ಅವು ಎಲ್ಲಾ ಕ್ರೈಸ್ತರಿಗೆ ನಿಜವಾದವುಗಳಾಗಿವೆ.

**ಯೆರೆಮೀಯನಿಂದ ಪ್ರವಾದನೆ**

ಒಂದು ಭಿನ್ನವಾದ ಸಂಕೇತವನ್ನು ಉಪಯೋಗಿಸಿ, ಯೆರೆಮೀಯನೂ ಸಹ ಹೊಸ ಒಡಂಬಡಿಕೆಯ ಸಭೆಯ "ಈ ದಿನಗಳನ್ನು" ಮುಂತಿಳಿಸಿದನು. ಪರಿಶುದ್ಧಾತ್ಮನು ಅವನಿಗೆ ಒಂದು ಪ್ರೇರೇಪಿತ ಸಾಮ್ಯವನ್ನು ಕೊಟ್ಟನು: ಪ್ರಾಪಂಚಿಕ ಇಸ್ರಾಯೇಲ ಮತ್ತು ಯೂದಾಯಗಳು, ಅವುಗಳು ಐಗುಪ್ತದಿಂದ ಹೊರಗೆ ಬಂದಾಗ, ಕರ್ತನಿಂದ ಒಂದು ಒಡಂಬಡಿಕೆಯನ್ನು ಸ್ವೀಕರಿಸಿದವು. ಈ ಒಡಂಬಡಿಕೆಯು ಬಾಹ್ಯವಾಗಿ ಕಲ್ಲುಗಳ ಮೇಲೆ ಪಪೈರಿಯ ಮೇಲೆ ಬರೆಯಲ್ಪಟ್ಟಿತು. ಆದರೆ ಆತ್ಮಿಕ ಇಸ್ರಾಯೇಲ ಮತ್ತು ಯೂದಾಯವು ಆಂತರಿಕವಾಗಿ ಹೃದಯಗಳ ಮತ್ತು ಮನಸ್ಸುಗಳ ಮೇಲೆ ಬರೆಯಲ್ಪಟ್ಟ ಒಂದು ಹೊಸ ಒಡಂಬಡಿಕೆಯನ್ನು ಸ್ವೀಕರಿಸುವವು (ಯೆರೆಮೀಯ 31:31-34; ನೋಡಿರಿ ಇಬ್ರಿಯ 8:6-13). ಪರಿಪೂರ್ಣ ನೆರವೇರುವಿಕೆಯಲ್ಲಿ, ದೇವರ ಸಭೆಯು ಹೃದಯದ ಹಲಿಗೆಗಳ ಮೇಲೆ ಅಪೊಸ್ತಲರ ಮುಖಾಂತರವಾಗಿ ಪರಿಶುದ್ಧಾತ್ಮನಿಂದ ಬರೆಯಲ್ಪಟ್ಟದ್ದರ ಪರಿಣಾಮವಾಗಿತ್ತು. 2 ಕೊರಿಂಥ 3:3ರಲ್ಲಿ ಪೌಲನು ಕ್ರೈಸ್ತರಿಗೆ ಹೀಗೆ ಹೇಳಿದನು, "ಕ್ರಿಸ್ತನು ನಮ್ಮ ಕೈಯಿಂದ ಬರಿಸಿಕೊಟ್ಟ ಪತ್ರವಾಗಿದ್ದೀರೆಂಬುದು ಪ್ರತ್ಯಕ್ಷವಾಗಿಯೇ ಇದೆ. ಅದು ಮಸಿಯಿಂದ ಬರೆದದ್ದಲ್ಲ, ಜೀವವುಳ್ಳ ದೇವರ ಆತ್ಮನಿಂದಲೇ ಬರೆದದ್ದು; ಕಲ್ಲಿನ ಮೇಲೆಯಲ್ಲ, ಮನುಷ್ಯ ಹೃದಯಗಳೆಂಬ ಹಲಿಗೆಗಳ ಮೇಲೆ ಬರೆದದ್ದು."

**ದಾನಿಯೇಲನಿಂದ ಪ್ರವಾದನೆ**

ದಾನಿಯೇಲ ಎಂಬ ಹೆಸರಿನ ಒಬ್ಬ ಸೆರೆಯವನು ದೇವರಿಂದ ಒಬ್ಬ ಪ್ರವಾದಿಯಂತೆ ಸಭೆಯ ಸ್ಥಾಪನೆಗಾಗಿ ಆರು ಶತಮಾನಗಳ ಹಿಂದೆ ಮುನ್ನೋಡಲು ಉಪಯೋಗಿಸಲ್ಪಟ್ಟನು. ದಾನಿಯೇಲನು ರೋಮನ್ ಅರಸರ ಸಮಯದ ಮೇಲೆ ಕೇಂದ್ರೀಕರಿಸಿ ದೊಡ್ಡ ರಾಜ್ಯಗಳ ಏಳುಬೀಳುವಿಕೆಗಳ ಬಗ್ಗೆ ಮಾತಾಡಿದನು. ಈ ಅರಸರುಗಳ ಆಳ್ವಿಕೆಯಲ್ಲಿ, ಪರಲೋಕದ ದೇವರು ಮಾನವ ಕೈಗಳಿಂದ ಮಾಡಿದ್ದಲ್ಲ, ಆದರೆ ಸ್ವಭಾವದಲ್ಲಿ ನಿತ್ಯವಾಗಿರುವ ರಾಜ್ಯವನ್ನು ಏರ್ಪಡಿಸುವನೆಂದು ಮುಂತಿಳಿಸಲು ಅವನು ಅಧಿಕಾರ ಹೊಂದಿದನು (ದಾನಿಯೇಲ 2:44; ಇಬ್ರಿಯ 12:28). ಆ ರಾಜ್ಯದ ಪ್ರಜೆಗಳು ಹೊಸ ಒಡಂಬಡಿಕೆಯ ಸಭೆಯಾಗಿರುವರು (ಕೊಲೊಸ್ಸೆ 1:1, 2, 13).

**ಯೋಹಾನನಿಂದ ಪ್ರವಾದನೆ**

ಕ್ರಿ.ಶ. 30ರಲ್ಲಿ ಸಭೆಯು ಸ್ಥಾಪಿಸಲ್ಪಡುವ ಮೊದಲು, ದೇವರು ಯೋಹಾನನೆಂಬ ಹೆಸರಿನ ಪ್ರಾವಾದಿಯನ್ನು ದೇವರು ಎಬ್ಬಿಸಿದನು. ಮಾನಸಾಂತರ ಪಡಲು, ಬರಲಿಕ್ಕಿದ್ದ ಮೆಸ್ಸೀಯನಲ್ಲಿ ನಂಬಿಕೆಯಿಡಲು ಮತ್ತು ತಮ್ಮ ಪಾಪಗಳ ನಿವಾರಣೆಗಾಗಿ ನೀರಿನಲ್ಲಿ ಬಾಪ್ತಿಸ್ಮ ಹೊಂದಲು (ಮತ್ತಾಯ 3:2; ಮಾರ್ಕ 1:4) ಜನರನ್ನು ಕರೆಯುವದರಿಂದ ಜನರನ್ನು ಸಿದ್ಧಪಡಿಸುವುದು ಅವನ ಕಾರ್ಯವಾಗಿತ್ತು (ಲೂಕ 1:17). ಯೋಹಾನನ ದಿನಗಳಲ್ಲಿ ಸಭೆಯು ಅಸ್ತಿತ್ವದಲ್ಲಿತ್ತು (ಸಿದ್ಧತೆಯಲ್ಲಿ) ಮತ್ತು ಜನರು ಅದರಲ್ಲಿ ಪ್ರವೇಶಿಸಲು ಧಾವಿಸುತ್ತಿದ್ದರು ಎಂದು ಒಬ್ಬನು ಹೇಳಬಹುದು (ಲೂಕ 16:16). ಹೀಗಿದ್ದರೂ, ನಿಜತೆಯಲ್ಲಿ, ಸಭೆಯು ಯೋಹಾನನ ದಿನದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ; ಅವನು ತಾನೇ ಅದರ ಸದಸ್ಯನಾಗಿರಲು ಅವಕಾಶ ಹೊಂದಿರಲಿಲ್ಲ (ಮತ್ತಾಯ 11:11). ಅದೇ ರೀತಿಯಲ್ಲಿ ದಾವೀದನು ಮುಂದೆ ದೇವಾಲಯವನ್ನು ಕಟ್ಟಲು ಸೊಲೊಮೋನನನ್ನು

ಉಪಯೋಗಿಸಿದ ಕೆತ್ತಿದ ಕಲ್ಲುಗಳನ್ನು ಸಿದ್ಧಪಡಿಸಿದಂತೆ, ಯೋಹಾನನು ಕ್ರಿಸ್ತನು ತನ್ನ ದೇವಾಲಯದಲ್ಲಿ, ಸಭೆಯಲ್ಲಿ ಇಟ್ಟ ಆತ್ಮಿಕ ಕಲ್ಲುಗಳನ್ನು ಸಿದ್ಧಪಡಿಸಿದನು.[2]

**ಕಾಲದ ಪರಿಪೂರ್ಣತೆ**

ಪ್ರವಾದಿಗಳೆಲ್ಲರೂ ಧರ್ಮಶಾಸ್ತ್ರವೂ ಪ್ರವಾದಿಸುವುದು ಯೋಹಾನನ ತನಕ ಇತ್ತು (ಮತ್ತಾಯ 11:13). ಮತ್ತು ಅವನ ನಂತರ ಪರಾರೌಷ್ಠತೆಯು, ಯೋಜಿಸುವ ಯುಗದ ನೆರವೇರುವಿಕೆಯು - ಅಂದರೆ ದೇವರ ರಾಜ್ಯದ ಸ್ಥಾಪನೆ, ಆತನ ಮನೆ, ಆತನ ಪರ್ವತ, ಆತನ ಜನಾಂಗ, ಆತನ ಸಭೆ ಸ್ಥಾಪಣೆಯು ಬಂದಿತು! ಸಮುವೇಲನಿಂದ ಪ್ರಾರಂಭಿಸಿ ಮಲಾಕಿಯನ ವರೆಗೆ ಮುಂದುವರಿಸಿದ ಪ್ರತಿಯೊಬ್ಬ ಪ್ರವಾದಿಯಿಂದ ಬರಲಿಕ್ಕಿದ್ದ ಸಭೆಯ ವಿಶೇಷತೆಯುಳ್ಳ ದೃಷ್ಟಿಕೋನವನ್ನು ಪ್ರಕಟಿಸುವಾಗ, ಹಳೇ ಒಡಂಬಡಿಕೆಯಿಂದ ನಾವು ಸರಿಯಾಗಿ ಆಶ್ಚರ್ಯಚಕಿತರಾಗುತ್ತೇವೆ. "ಕಾಲದ ಪರಿಪೂರ್ಣತೆಯಲ್ಲಿ" (ಗಲಾತ್ಯ 4:4) ತನ್ನ ನಿತ್ಯ ಉದ್ದೇಶಕ್ಕನುಗುಣವಾಗಿ (ಎಫೆಸ 3:11), ದೇವರ ಹುಡುಕಲಾರದ ಜ್ಞಾನದ ಐಶ್ವರ್ಯಗಳ ಆಳವು ಮಾನವರಿಗೆ ಪ್ರಕಟಿಸಲ್ಪಟ್ಟಿತು!

## ಮುಕ್ತಾಯ

ಕರ್ತನ ಮನಸ್ಸನ್ನು ತಿಳುಕೊಂಡವನಾರು? ಆತನಿಗೆ ಆಲೋಚನಾಕರ್ತನು ಯಾರು? (ನೋಡಿರಿ ರೋಮಾಪುರ 11:34.) ಕರ್ತನೂ ರಕ್ಷಕನೂ ಆದ ಯೇಸುಕ್ರಿಸ್ತನ ಮುಖಾಂತರ ನಾವೆಲ್ಲರೂ ಆತನವರು, ಮತ್ತು ಆತನ ಮುಖಾಂತರ ಹಾಗೂ ಆತನಿಗಾಗಿ ಇರುವವರಾಗಿದ್ದೇವೆ!

---

ಟಿಪ್ಪಣಿಗಳು

[1]"Church" ಎಂಬ ಇಂಗ್ಲೀಷ್ ಪದವು ಮಧ್ಯದ ಇಂಗ್ಲೀಷ್‌ನ *chirche* ಎಂಬುದರಿಂದ ಬಂದಿದೆ, ಅದು ಪುರಾತನ ಇಂಗ್ಲೀಷ್ *cyrice* ಎಂಬುದರಿಂದ ಅದು ಜರ್ಮನದ *Kirche* ಎಂಬುದರಿಂದ, ಅದು ಒಂದು ಗ್ರೀಕ ಪದ *cyriacon* ಎಂಬುದರಿಂದ, ಬಂದಿದೆ. ಅರ್ಥವು "ಸಂಬಂಧಿಸಿದ್ದು" (pertaining to) ಎಂದಾಗುತ್ತದೆ. Cyriacon ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಕೇವಲ ಎರಡು ಸಲ ಕಂಡುಬರುತ್ತದೆ: ಮೊದಲನೆಯ ಸಲ ಕರ್ತನ ಭೋಜನಕ್ಕೆ ಸಂಬಂಧಿಸಿ (1 ಕೊರಿಂಥ 11:20), ಮತ್ತು ಎರಡನೆಯ ಸಲ, ಕರ್ತನ ದಿನಕ್ಕೆ ಸಂಬಂದಿಸಿ (ಪ್ರಕಟನೆ 1:10). ಅನಂತರ ಈ ಪದವು ಕರ್ತನ ಮನೆಗೆ ಸಂಬಂಧಿಸಿದ್ದಕ್ಕೆ ಉಪಯೋಗಿಸಲ್ಪಡಲಿಕ್ಕೆ ಬಂದಿತು, ಮತ್ತು ಹೀಗೆ "church" ಎಂಬ ಇಂಗ್ಲೀಷ್ ಪದದ ಅರ್ಥ "ಕರ್ತನ ಮನೆ" ಎಂದಾಗುತ್ತದೆ. ಯೇಸುವು ತನ್ನ ಜನರನ್ನು, ಪ್ರವಾದಿಗಳಿಂದ ಮತ್ತು ಯೋಹಾನನಿಂದ ಮುಂತಿಳಿಸಲ್ಪಟ್ಟ ಜನರನ್ನು ವಿವರಿಸಲಿಕ್ಕೆ ಯೇಸು ಉಪಯೋಗಿಸಿದ ಪದವು *ಎಕ್ಲೇಸಿಯ.* ಅರ್ಥ - "ಹೊರಗೆ ಕರೆಯಲ್ಪಟ್ಟವರು." ಆದುದರಿಂದ, ಭೂಲೋಕದ ಎಲ್ಲಾ ಜನರು, ಅಶುದ್ಧ ಸಂಗತಿಗಳಿಂದ ಹೊರಗೆ ಬಂದು ಪ್ರತಿಯೊಂದರಲ್ಲಿ ಆತನ ಒಡೆತನಕ್ಕೆ ಒಪ್ಪಿಸಿಕೊಡಲು ಬರಬೇಕೆಂಬ ಯೇಸುವಿನ ಕರೆಗೆ ಉತ್ತರ ಕೊಟ್ಟವರು, ಆತನ *ಎಕ್ಲೇಸಿಯಾ*, ಆತನ ಹೊರಗೆ ಕರೆಯಲ್ಪಟ್ಟ ಗುಂಪು, ಆತನ ಸಭೆ ಆಗಿದ್ದಾರೆ. [2]ಯೋಹಾನನು ಬಾಪ್ತಿಸ್ಮ ಮಾಡಿಸಿದವರು ಎಂದಾದರೂ ಪುನಃ ಬಾಪ್ತಿಸ್ಮ ಮಾಡಿಸಿ ಕೊಳ್ಳುವ ಅಗತ್ಯತೆಯುಳ್ಳವರಾಗಿದ್ದರೆಂದು ಯಾವುದೇ ದಾಖಲೆ ತೋರಿಸುವದಿಲ್ಲ. ಅಂಥ ಅಗತ್ಯತೆಯು ಯೋಹಾನನು ತನಗೆ ನೇಮಿಸಲ್ಪಟ್ಟ ಕೆಲಸವನ್ನು ಯೋಗ್ಯವಾಗಿ ಮಾಡಲಿಲ್ಲ ಎಂದರ್ಥ ಕೊಡುತ್ತದೆ: ಕರ್ತನಿಗಾಗಿ ಜನರನ್ನು ಸಿದ್ಧಪಡಿಸುವ ಕೆಲಸ (ಲೂಕ 1:17). ಇದಲ್ಲದೇ, ಅದು ಅಗತ್ಯವಾಗಿದ್ದರೆ, ಪೇತ್ರನು ಪಂಚಾಶತ್ತಮದ ದಿನದಂದು ಎರಡನೆಯ ಸಲ ಬಾಪ್ತಿಸ್ಮ ಹೊಂದಲು ನಿಶ್ಚಯವಾಗಿ ನಡಿಸುತ್ತಿದ್ದನು. ಇಪ್ಪತ್ತನಾಲ್ಕು ವರ್ಷಗಳ ನಂತರ ಎಫೆಸದಲ್ಲಿ, ಯಾರೋ ಒಬ್ಬನು (ಬಹುಶಃ ಅಪೊಲ್ಲೋಸನು) ಮುಂದೆ

ಬರಲಿಕ್ಕಿದ್ದ ಮೆಸ್ಸೀಯನ ಬಗ್ಗೆ ಯೋಹಾನನ ನಿರೀಕ್ಷೆಯ ಸಂದೇಶವನ್ನು ಇನ್ನೂ ಪ್ರಸಂಗಿಸುತ್ತಿದ್ದನು ಮತ್ತು ಅವನು ಕಡಿಮೆ ಪಕ್ಷ ಹನ್ನೆರಡು ಜನರಿಗೆ ಬಾಪ್ತಿಸ್ಮ ಕೊಟ್ಟನು ಎಂಬುದು ಸತ್ಯವಾಗಿದೆ (ಅಪೊಸ್ತಲರ ಕೃತ್ಯಗಳು 19:1-4). ಈ ಜನರು ಕ್ರಿ.ಶ. 54ರಲ್ಲಿ ಅಜ್ಞಾನದಲ್ಲಿ ಬಾಪ್ತಿಸ್ಮ ಹೊಂದಿದರು. ಕ್ರಿ.ಶ. 30ರಲ್ಲಿ ಮೆಸ್ಸೀಯನು ಆಗಲೇ ಬಂದನು ಮತ್ತು ಅವರಿಗಾಗಿ ಮರಣ ಹೊಂದಿದನು ಎಂಬುದನ್ನು ತಿಳಿದಿರಲಿಲ್ಲ. ಅದರ ಪರಿಣಾಮವಾಗಿ, ಅವರು ಸತ್ಯವನ್ನು ತಿಳಿದಾಗ, ಅವರು ಪುನಃ ಬಾಪ್ತಿಸ್ಮ ಹೊಂದುವುದು ಅವಶ್ಯಕವಾಗಿತ್ತು. ಕ್ರಿ.ಶ. 30ರ ಮೊದಲು ಬಾಪ್ತಿಸ್ಮ ಹೊಂದಿದ ಯಾವುದೇ ವ್ಯಕ್ತಿ ಪುನಃ ಬಾಪ್ತಿಸ್ಮ ಹೊಂದಿದ ಯಾವುದೇ ಸೂಚನೆಯನ್ನು ನಾವು ಕಂಡುಕೊಳ್ಳುವುದಿಲ್ಲ.

© 2009 Truth for Today